**ದಿನಾಂಕಃ 30.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ದಿನಾಂಕ 01.01.2023ರಂದು ಬೆಳಗಿನ ಜಾವ 3.30 ಗಂಟೆಯ ಸಮಯದಲ್ಲಿ ಅಪಘಾತ ಸಂಭವಿಸಿರುತ್ತದೆ. ಅಪಘಾತವಾದಾಗ ನನ್ನ ಜೊತೆ ಬಡೇಶಾ ರವರು ಇದ್ದರು. ಅವರು ಜಿಗಣಿಯ ನಿವಾಸಿಯಾಗಿದ್ದು, ಸುಮಾರು 4-5 ವರ್ಷಗಳಿಂದ ನನಗೆ ಪರಿಚಯ ಇದ್ದಾರೆ. ಆ ದಿನ ಹೊಸ ವರ್ಷದ ಆಚರಣೆಯ ಸಲುವಾಗಿ ಬಡೇಶಾ ರವರು ನನ್ನನ್ನು ಕರೆದ ಮೇರೆಗೆ ಹೋಗಿದ್ದು, ಬರುವಾಗ ಅಪಘಾತವಾಗಿರುತ್ತದೆ. ಆ ದಿನ ಬಡೇಶಾ ಮತ್ತು ನನ್ನನ್ನು ಸೇರಿ ಒಟ್ಟು 4-5 ಜನ ಇದ್ದೆವು. ಉಳಿದವರುಗಳು ಬಡೇಶಾರವರ ಸ್ನೇಹಿತರು. ಆ ದಿನ ಯಾರ ಜನ್ಮ ದಿನ ಆಗಿರಲಿಲ್ಲ. ನಾನು ಹೋದ ಸ್ಥಳ ನಮ್ಮ ಮನೆಯಿಂದ ಸುಮಾರು 4-5 ಕಿ.ಮೀ ಅಂತರ ಇದೆ. ನಾನು ಸೂರುವಾರ ಹಳ್ಳಿಯ ನಿವಾಸಿ. ನಾವು ಬೆಂಗಳೂರಿಗೆ ಬಂದು 12 ವರ್ಷಗಳಾದವು. ನಾನು ಜಿಗಣಿಯ ನಿವಾಸಿಯಾಗಿದ್ದು, ಮನೆಯ ಸಂಖ್ಯೆ ಸರಿಯಾಗಿ ನೆನಪಿಲ್ಲ, ಆದರೆ ವಿನಾಯಕ ನಗರದ ವಾರ್ಡ್ ನಂ.7 ಆಗಿರುತ್ತದೆ. ನಾವು ವಾಸ ಇರುವ ಮನೆಯ ಮಾಲೀಕರ ಹೆಸರು ನರಸಿಂಹರೆಡ್ಡಿ ಆಗಿದ್ದು, ಸುಮಾರು 5 ವರ್ಷಗಳಿಂದ ಅವರ ಅಡಿ ಬಾಡಿಗೆಯಲ್ಲಿ ಇದ್ದೇವೆ. ನನ್ನ ಜೊತೆ ನನ್ನ ತಾಯಿ ಮತ್ತು ತಮ್ಮ ವಾಸವಾಗಿದ್ದಾರೆ. ನನ್ನ ತಂದೆ ಸುಮಾರು 5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಾನು ಆ ದಿನ ಹೋಗುತ್ತಿದ್ದ ವಾಹನ ಬಡೇಶಾ ರವರಿಗೆ ಸೇರಿದ್ದು. ಸದರಿ ವಾಹನದ ಸಂಖ್ಯೆ ನೆನಪಿಲ್ಲ. ಬಡೇಶಾ ಮತ್ತು ನಾನು ಬೇರೆ ಬೇರೆ ಕಡೆ ಕೆಲಸ ಮಾಡುತ್ತೇವೆ. ನಾನು ಚಾಲನಾ ಪರವಾನಗಿಯನ್ನು ಹೊಂದಿಲ್ಲ.

ಅಪಘಾತವಾದ ನಂತರ ಜಿಗಣಿಯ ವಿಜಯಶ್ರೀ ಆಸ್ಪತ್ರೆಗೆ ಹೋಗಿರುತ್ತೇವೆ. ಆಗ ನನಗೆ ಪ್ರಜ್ಞೆ ಇರಲಿಲ್ಲ. ಸದರಿ ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಸಂಭವಿಸಿತು ಎಂದು ತಿಳಿಸಿದ ಬಗ್ಗೆ ನನಗೆ ಮಾಹಿತಿ

ಇಲ್ಲ. ವಿಜಯಶ್ರೀ ಆಸ್ಪತ್ರೆಯ ಎಂ.ಎಲ್.ಸಿ ಯನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದು, ನಂತರ ನಾರಾಯಣ ಹೃದಯಾಲಯಕ್ಕೆ ದಾಖಲಾಗಿರುತ್ತೇನೆ. ಸದರಿ ಆಸ್ಪತ್ರೆಗೆ ಸುಮಾರು 5 ಬಾರಿ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯ ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲಾತಿ ಕಳೆದು ಹೋಗಿರಬಹುದು. ಎರಡೂ ಆಸ್ಪತ್ರೆಗಳಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ಎರಡು ಶಸ್ತ್ರ ಚಿಕಿತ್ಸೆಗಳನ್ನು ನಾರಾಯಣ ಹೃದಯಾಲಯದಲ್ಲಿ ಮಾಡಿರುತ್ತಾರೆ. ಎರಡೂ ಆಸ್ಪತ್ರೆಗಳಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳ ಮೊತ್ತವನ್ನು ಮರುಪಾವತಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾರಾಯಣ ಹೃದಯಾಲದಲ್ಲಿ ನಾನು ಇ.ಎಸ್.ಐ ಸೌಲಭ್ಯ ಪಡೆದಿರುತ್ತೇನೆ ಎಂದರೆ ಸರಿ. ಇ.ಎಸ್.ಐ ಕಾರ್ಡು ಈಗ ಇಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಸಾಕ್ಷಿಯು ಈಗ ಕಾರ್ಡ್ ಇಲ್ಲ ಎಂದು ನುಡಿಯುತ್ತಾರೆ. ಕಾರ್ಡು ಹೊಂದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಬಗ್ಗೆ ದೂರನ್ನು ಪ್ರದಿಪ್ ಎಂಬುವವರು ನೀಡಿರುತ್ತಾರೆ. ಪ್ರದಿಪ್ ರವರು ಯಾವಾಗ ದೂರು ನೀಡಿದರು ಎಂದು ನಿಖರವಾಗಿ ಗೊತ್ತಿಲ್ಲ, ಆದರೆ ಒಂದು ವಾರದ ನಂತರ ನೀಡಿರಬಹುದು. ಅಪಘಾತವಾದ ದಿನಾಂಕದಂದು ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಪ್ರದಿಪ್ ರವರು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಮೊಬೈಲ್ ನಿಂದ ಪ್ರದಿಪ್ ಗೆ ಕರೆ ಮಾಡಿದ ಮೇರೆಗೆ ಆತನಿಗೆ ಅಪಘಾತದ ಬಗ್ಗೆ ತಿಳಿದು ಬಂದಿರುತ್ತದೆ. ಸದರಿ ಪ್ರದಿಪ್ ಇಂದಿಗೂ ಆನೆಕಲ್ ನಲ್ಲಿ ಇದ್ದಾನೆ. ನನ್ನ ಮೊಬೈಲ್ ಸಂಖ್ಯೆ 7090403488 ಆಗಿರುತ್ತದೆ. ನಾನು ಮೊದಲಿನಿಂದಲೂ ಇದೇ ಸಂಖ್ಯೆಯನ್ನು ಉಪಯೋಗಿಸುತ್ತಿದ್ದೇನೆ.

ನಾನು ಐಟಿಐ ತರಬೇತಿಯನ್ನು ಪೂರ್ಣಗೊಳಿಸಿರುವುದಿಲ್ಲ. ನಾನು ತರಬೇತಿ ಪಡೆಯುತ್ತಿದ್ದ ಸಂಸ್ಥೆಯ ಹೆಸರು ಗೊತ್ತಿಲ್ಲ. ನಿತ್ಯಾನಂದ ಪ್ರೌಢ ಶಾಲೆಯಲ್ಲಿ 10ನೇ ತರಗತಿಯನ್ನು ವ್ಯಾಸಂಗ ಮಾಡಿರುತ್ತೇನೆ. 10ನೇ ತರಗತಿಯಲ್ಲಿ ಒಟ್ಟು ಟ 332 ಅಂಕಗಳನ್ನು ಪಡೆದಿರುತ್ತೇನೆ. ಅಪಘಾತವಾದಾಗ ಬಡೇಶಾ ಮತ್ತು ನಾನು ಇಬ್ಬರು ಬಿದ್ದಿರುತ್ತೇವೆ. ಬಡೇಶಾ ಗೆ ಸಣ್ಣಪುಟ್ಟ ತೆರಚಿದ ಗಾಯಗಳು ಆಗಿರುತ್ತವೆ. ಬಡೇಶಾ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದನು ಎಂಬುದು ನನಗೆ ಗೊತ್ತಿಲ್ಲ. ಅಪಘಾತವಾದ ನಂತರದಲ್ಲಿ ಬಡೇಶಾ ನನ್ನನ್ನು ಭೇಟಿಯಾಗಿರುವುದಿಲ್ಲ. ಬಡೇಶಾ ರವರ ಮೊಬೈಲ್ ಸಂಖ್ಯೆ ಇದೆ, ಆದರೆ ಅವರ ಸಂಪರ್ಕದಲ್ಲಿ ನಾನು ಇಲ್ಲ. ಬಡೇಶಾ ಗೆ ಸಂಬಂಧಪಟ್ಟ ವೈದ್ಯಕೀಯ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಬಡೇಶಾನ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ, ಆದರೆ ಅವನು ನನಗೆ ಸಿಗುವುದಿಲ್ಲ. ಆ ದಿನ ನಾನೇ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಬಿದ್ದಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಬಡೇಶಾ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಗಿ ಇಲ್ಲದೇ ಇದ್ದ ಕಾರಣ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಬಡೇಶಾ ವಾಹನ ಚಾಲನೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಬಡೇಶಾ ಮತ್ತು ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಧರಿಸಿದ್ದಲ್ಲಿ ನನಗೆ ತಲೆಗೆ ಪೆಟ್ಟಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ನಾನು ಅರ್ಧ ಹೆಲ್ಮೆಟ್ ಧರಿಸಿದ್ದೆ ಎಂದು ನುಡಿಯುತ್ತಾರೆ. ನಾನು ಹೆಲ್ಮೆಟ್ ಧರಿಸಿದ್ದ ಬಗ್ಗೆ ಪ್ರದಿಪ್ ರವರು ದೂರಿನಲ್ಲಿ ಹೇಳಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ಆ ದಿನ ಆಚರಣೆಯಲ್ಲಿ ಮದ್ಯಸೇವನೆ ಮಾಡಿರಲಿಲ್ಲ. ನಾವು ಮದ್ಯಸೇವನೆ ಮಾಡಿದ್ದು, ಅದರ ಅಮಲಿನಲ್ಲಿ ಬಿದ್ದು ಗಾಯ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿರುವ

ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗೆ ನಾನು ಹೇಳಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲು ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ 5 ವರ್ಷ ಕೆಲಸ ಮಾಡಿರುತ್ತೇನೆ. ಅದರ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ಒಟ್ಟು ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಸುಮಾರು 20 ಜನ ಕೆಲಸಗಾರರು ಇರಬಹುದು. ಈಗ ನಾನು ಅಲ್ಲಿ ಕೆಲಸ ಮಾಡುತ್ತಿಲ್ಲ. ಸ್ಟೆಲ್ಲಿಸ್ ಬಯೋಫಾರ್ಮಾ ದವರು ನನ್ನನ್ನು ಕೆಲಸದಿಂದ ತೆಗೆದಿರುತ್ತಾರೆ. ಆ ಬಗ್ಗೆ ಲಿಖಿತ ಆದೇಶ ನೀಡಿಲ್ಲ. ನಾನು ಕೆಲಸಕ್ಕೆ ಬರುವುದಾಗಿ ಅವರಿಗೆ ಲಿಖಿತವಾಗಿ ಮನವಿ ನೀಡಿಲ್ಲ. ನಾನು ಗುತ್ತಿಗೆದಾರರ ಮೂಲಕ ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ಕೆಲಸಕ್ಕೆ ಸೇರಿದ್ದೆ. ಸದರಿ ಗುತ್ತಿಗೆದಾರರ ಹೆಸರು ನನಗೆ ಈಗ ನೆನಪಿಲ್ಲ. ಸಂಬಳದ ಹಣವನ್ನು ನಗದು ರೂಪದಲ್ಲಿ ನೀಡುತ್ತಿದ್ದರು. ಆ ಬಗ್ಗೆ ದಾಖಲಾತಿಯನ್ನು ನಿರ್ವಹಣೆ ಮಾಡುತ್ತಿದ್ದರು. ಸದರಿ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ಹಾಜರಾತಿ ನಿರ್ವಹಣೆ ಮಾಡುತ್ತಾರೆ. ಸದರಿ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಮತ್ತು ಸಂಬಳದ ಬಗ್ಗೆ ಮತ್ತು ಕೆಲಸದಿಂದ ತೆಗೆದು ಹಾಕಿದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅವರು ನೀಡುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈಗಲೂ ಸ್ಟೆಲ್ಲಿಸ್ ಬಯೋಫಾರ್ಮಾ ದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ್ಟೆಲ್ಲಿಸ್ ಬಯೋಫಾರ್ಮಾ ಗೆ

ಸಂಬಂಧಪಟ್ಟವರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ಕಂಡ ಪ್ರತ್ಯಕ್ಷದರ್ಶಿಗಳನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಬಿದ್ದು ಗಾಯಪಡಿಸಿಕೊಂಡ ಕಾರಣ ಪ್ರತ್ಯಕ್ಷ ಸಾಕ್ಷಿದಾರರ ಬಗ್ಗೆ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿದಾರರು ಅವರಿಗೆ ಕೇಳಲಾದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಯಾವುದೇ ತೊಂದರೆ ಇಲ್ಲದೆ ಉತ್ತರಿಸಿರುತ್ತಾರೆ).

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**